

ವೃತ್ತಿಪರ ಬುಲ್‌ಫೈಟರ್ ಆದ ಮೊದಲ ಅಮೆರಿಕನ್ ಮಹಿಳೆ ಎಂದೂ ಹೆಸರು ಪಡೆದಿದ್ದ ಪ್ಯಾಟ್ರಿಷಿಯಾ, ಟೆಕ್ಸಾಸ್‌ನವರು. ಮನೆ ನಿಭಾಯಿಸಿಕೊಂಡಿದ್ದರೆ ಸಾಕು ಎಂಬ ನಿರೀಕ್ಷೆಯಷ್ಟೇ ಹೆಣ್ಣಿನ ಬಗ್ಗೆಯಿದ್ದ ಆ ಕಾಲದಲ್ಲಿ, ಆ ಸಾಮಾಜಿಕ ಸರಪಳಿಯನ್ನು ಭೇದಿಸಿ ಪುರುಷರಿಗೆ ಸೀಮಿತ ಎಂದಿದ್ದ ಈ ಕ್ರೀಡೆಗೆ ಇಳಿದವರು. ಕ್ರೀಡೆಯಲ್ಲಿ ಲಿಂಗಸಮಾನತೆಗಾಗಿ ಹೋರಾಡಿದವರು. 1950ರ ಕಾಲಘಟ್ಟದಲ್ಲಿ ಸಹೋದ್ಯೋಗಿ ಪುರುಷರೂ ಕೊಂಡಾಡುವಂಥ ಶೌರ್ಯದಿಂದಲೇ ಹೆಸರಾದವರು.

ವೃತ್ತಿಬದುಕಿನಲ್ಲಿ ಸುಮಾರು ಆರು ಬಾರಿ ತೀವ್ರ ಗಾಯಗೊಂಡರು. ಒಮ್ಮೆ ಗೂಳಿಯ ಕೊಂಬಿಗೆ ಸಿಲುಕಿ ಸಾವನ್ನು ಹತ್ತಿರದಿಂದ ಕಂಡು ಮರಳಿಬಂದರು. ಕ್ರೀಡೆಗೆ ಇಳಿದ 10 ವರ್ಷಗಳಲ್ಲಿ ನೂರಾರು ಕಾಳಗದಲ್ಲಿ ಭಾಗವಹಿಸಿದರು. ಅದಾಗ್ಯೂ ಅವರಿಗೆ 'ಅಪ್ರೆಂಟೀಸ್' ಪಟ್ಟವನ್ನು ಮೀರಿ ಹೋಗಲು ಸಾಧ್ಯವಾಗಲಿಲ್ಲ. ಸಾಮರ್ಥ್ಯವಿದ್ದರೂ ಹೆಣ್ಣೆಂಬ ಕಾರಣಕ್ಕೆ ಪ್ರಾಯೋಜಕತ್ವ ಸಿಗದೇ ಉಳಿದವರಲ್ಲಿ ಅವರೂ ಇದ್ದರು.

ಕಾಂಚಿತಾ ಸಿಂಟ್ರಾನ್– ಗೂಳಿಕಾಳಗ ಕ್ರೀಡೆಯಲ್ಲಿ ನೆನಪಿಸಿಕೊಳ್ಳಬೇಕಾದ ಮತ್ತೊಬ್ಬ ಗಟ್ಟಿಗಿತ್ತಿ. 'ದಿ ಗೋಲ್ಡನ್ ಗಾಡೆಸ್' ಎಂದೇ ಕರೆಸಿಕೊಂಡ ಚಿಲಿ ಮೂಲದ ಇವರು, ಬುಲ್‌ಫೈಟಿಂಗ್‌ನಲ್ಲಿ ಜನಪ್ರಿಯತೆಯ ಕಿರೀಟ ತೊಟ್ಟವರು. ತಮ್ಮದೇ ಶೈಲಿ, ನೈಪುಣ್ಯ ಹಾಗೂ ಶೌರ್ಯವನ್ನು ತೋರಿ ಈ ಕ್ರೀಡೆಗೆ ಮೆರುಗು ತಂದವರು ಕೂಡ. ಇದೇ ಕ್ರೀಡೆಯಲ್ಲಿ ದೇಶ ವಿದೇಶ ಸುತ್ತಿದರು. ತಮ್ಮ ಅವಧಿಯಲ್ಲಿ ಸಾಕಷ್ಟು ಗೂಳಿಗಳೊಂದಿಗೆ ಸೆಣಸಿ ಕೊಂದವರು.

ಕುದುರೆ ಏರಿ ಗೂಳಿಕಾಳಗ ಮಾಡುತ್ತಿದ್ದ ವಿಧಾನ– ರೆಜೋನಿಯೊ (rejoneo)ಗೆ ಮಾತ್ರ ಅವಕಾಶ ನೀಡಿದ್ದ ಸಮಯದಲ್ಲಿ, 'ಆನ್ ಫೂಟ್'– ಅಂದರೆ ಕಣದಲ್ಲಿ ಇಳಿದು ಕ್ರೀಡೆಯಲ್ಲಿ ನಿಯಮ ಉಲ್ಲಂಘಿಸಿದ ಕಾರಣಕ್ಕೆ ಜೈಲಿಗೆ ಸೇರಿದರೂ, ಪ್ರೇಕ್ಷಕರ ಪ್ರೀತಿಯ ಪ್ರತಿಭಟನೆಯಿಂದಾಗಿ ಬಿಡುಗಡೆಗೊಂಡರು. ಗೂಳಿಕಾಳಗದ ಇತಿಹಾಸದಲ್ಲೇ ನಡೆದ ಅಪರೂಪದ ಪ್ರಸಂಗವಿದು.

ಕ್ರಿಸ್ಟಿನಾ ಸ್ಯಾಂಚೆಜ್ ಹೆಸರನ್ನೂ ಪಟ್ಟಿಯಿಂದ ಹೊರಗಿಡಲು ಸಾಧ್ಯವಿಲ್ಲ. ಸ್ಪೇನ್‌ನ ಮ್ಯಾಡ್ರಿಡ್‌ನಲ್ಲಿ ಹುಟ್ಟಿದ ಕ್ರಿಸ್ಟಿನಾ, ಬುಲ್‌ಫೈಟಿಂಗ್ ಪದವಿಯನ್ನು ಅಧಿಕೃತವಾಗಿ ಪಡೆದ ಯೂರೋಪ್‌ನ ಮೊದಲ ಮಹಿಳೆ. 90ರ ದಶಕದಲ್ಲಿ ಈ ಕ್ರೀಡೆಯನ್ನಾಳಿದ ಇವರು 1996ರಲ್ಲಿ ಪೂರ್ಣ ಸ್ಥಾನಮಾನ ಪಡೆದರು. ಕೆಲವು ಮಹಿಳಾಪರ ಹೋರಾಟದಲ್ಲಿಯೂ ಮುಂದಾಳತ್ವ ವಹಿಸಿದ್ದವರು.

ಆನಂತರದ ಕಾಲಘಟ್ಟದಲ್ಲಿ ಸಾಮಾಜಿಕ ಒತ್ತಡದ ಕಾರಣದಿಂದ ಮ್ಯಾಟಡೊರಾಸ್ ಆಗುವ ಕನಸನ್ನು ಬದಿಗಿಟ್ಟ ಎಷ್ಟೋ ಹೆಣ್ಣುಮಕ್ಕಳಿದ್ದರು. ಇವರ ನಡುವೆಯೇ, ಆ ಕನಸಿನ ಬೆನ್ನತ್ತಿ ಹೊರಟು ಕಷ್ಟಗಳ ನಡುವೆ ಸಾಧಿಸಿದ ಮಹಿಳೆಯರೂ ಇದ್ದರು.

ಜೊವಾಕ್ವಿನಾ ಅರಿಝೂ ಜೆನಿರ್, ಮಾರಿಬೆಲ್ ಅಟೀನ್‌ಝುರ್, ಇಸಾಬೆಲ್ ಬೆನಿಯರ್ಸ್, ಟೆರೆಸ ಬೋಲ್ಸಿ, ಮಾರಿ ಫೋರ್ಟ್ಸ್ ರೋಕಾ, ಏಂಜೆಲಾ ಹರ್ನಾಂಡೆಸ್, ಎಲೆನಾ ಗರ್ಯರಾಲ್... ಮಹಿಳಾ ಬುಲ್‌ಫೈಟರ್‌ಗಳ ಪಟ್ಟಿಯಲ್ಲಿ ಕಂಡುಬರುವ ಈ ಹೆಸರುಗಳ ನಡುವೆ, ಕುದುರೆ ಮೇಲೆ ಕುಳಿತು ಕಾಳಗ ಮಾಡುವ ಛಾತಿಯಲ್ಲಿ ಗೆಲುವು ಸಾಧಿಸಿದ ಲೀ ವೀಸೆನ್ಸ್, ಗೂಳಿಯ ಎರಡು ಕಿವಿಗಳನ್ನು ಜಗ್ಗಿ ಸೆಣಸಿದ ಮೊದಲ ಮಹಿಳೆ ಎಂದು ಕರೆಸಿಕೊಂಡು 'ಬಿಬಿಸಿ 100' ಮಹಿಳೆಯರಲ್ಲಿ ಗುರುತಿಸಿಕೊಂಡ ಕೋಂಚಿ ರಿಯೋಸ್, 20 ವರ್ಷಗಳ ಸುದೀರ್ಘ ಕಾಲ ಸ್ಪೇನ್‌ನಲ್ಲಿ ಹಲವು ಗೆಲುವುಗಳನ್ನು ಮುಡಿಗೇರಿಸಿಕೊಂಡ ಮ್ಯಾರಿ ಪಾಜ್ ವೇಗಾ – ಇವರ ಗೂಳಿಕಾಳಗದ ಸಾಧನೆಗಳು ವಿಶ್ವಕ್ಕೆ ಮಹಿಳೆಯರ ಸಾಮರ್ಥ್ಯವನ್ನು ತೋರಿದ ನಿದರ್ಶನಗಳೂ ಆಗಿವೆ.

ಸಂಖ್ಯಾಬಲದಲ್ಲಿ ಹಿಂದುಳಿದಿರುವುದು ಮಹಿಳಾ ಬುಲ್‌ಫೈಟರ್‌ಗಳ ಹಿನ್ನಡೆಗೂ ಕಾರಣವಾಗಿದೆ. ವಿಶ್ವದಲ್ಲಿ ಈಗಲೂ ಮಹಿಳಾ ಬುಲ್‌ಫೈಟರ್‌ಗಳ ಸಂಖ್ಯೆ ಬೆರಳೆಣಿಕೆಯಿದೆಯಷ್ಟೆ. ಇದಕ್ಕೆ ಮೆಕ್ಸಿಕೊದ ಬುಲ್‌ಫೈಟರ್ ಹಿಲ್ಡಾ ಟೆನೊರಿಯೊ ನೀಡುವ ವಿವರಣೆಯೂ ಆಸಕ್ತಿದಾಯಕವಾಗಿದೆ.

'ಪುರುಷರು ಬಲಿಷ್ಠರು, ಗಟ್ಟಿಗರು ಎಂಬ ಪೂರ್ವನಿರ್ಧರಿತ ಆಲೋಚನೆಯಿಂದ ಪ್ರೇರಿತರಾಗಿ, ಕಾಳಗದಲ್ಲಿ ಒಂದಿಷ್ಟು ಹಿಂದುಳಿದರೂ, ಮಹಿಳೆಯರ ದೈಹಿಕ ಬಲವನ್ನೇ ಮುಂದಿಟ್ಟುಕೊಂಡು ಲಘುವಾಗಿ ನೋಡುವ ಮನೋಭಾವ ಬದಲಾಗಬೇಕು. ಬುಲ್‌ಫೈಟಿಂಗ್ ಬಲದ ಮೇಲಷ್ಟೇ ನಡೆಯುವ ಕ್ರೀಡೆಯಲ್ಲ. ತಂತ್ರಗಾರಿಕೆಯ ಪ್ರಶ್ನೆಯೂ ಇಲ್ಲಿ ಬರುವುದಿಲ್ಲ. ಇದು ಆತ್ಮಬಲದ ವಿಷಯವೂ ಹೌದು ಎಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು. ಇದನ್ನು ಆಧರಿಸಿ ಮಹಿಳೆಯರನ್ನು ಮುನ್ನಡೆಸುವ ಪ್ರಯತ್ನಗಳು ನಡೆಯಬೇಕು'. ಹಿಲ್ಡಾ ಅವರ ಈ ಮಾತು ಎಲ್ಲಾ ಕಾಲಕ್ಕೂ, ಎಲ್ಲಾ ಕ್ಷೇತ್ರಕ್ಕೂ ಅನ್ವಯಿಸುವಂಥದ್ದು.

ಮಹಿಳಾ ಬುಲ್‌ಫೈಟರ್‌ಗಳ ಕುರಿತು ಸಿನಿಮಾಗಳೂ ಬಂದಿವೆ. ಅವುಗಳಲ್ಲಿ 2009ರಲ್ಲಿ Ella Es el Matador (She Is the Matador) ಎಂಬ ಹೆಸರಿನ ಸಿನಿಮಾ ಖ್ಯಾತಿ ಗಳಿಸಿತು. ಸಮಾಜದಲ್ಲಿನ ಸಾಂಪ್ರದಾಯಿಕ, ಲಿಂಗತಾರತಮ್ಯ ನಡೆಯ ವಿರುದ್ಧ ನಿಂತು ಗೂಳಿಕಾಳಗದ ಕ್ರೀಡೆಯಲ್ಲಿ ತಮ್ಮ ಗುರುತು ಮೂಡಿಸಿದ ಇಬ್ಬರು ಮಹಿಳೆಯರ ಕಥನವನ್ನು ಸಿನಿಮಾ ಒಳಗೊಂಡಿದೆ. ಪುರುಷರನ್ನಷ್ಟೇ ಪ್ರೋತ್ಸಾಹಿಸುತ್ತಿದ್ದ, ಅವರ ತಪ್ಪುಗಳನ್ನೂ ಸಮರ್ಥಿಸಿಕೊಳ್ಳುತ್ತಿದ್ದ ಸಮಾಜದಲ್ಲಿ ತಮ್ಮ ಕನಸನ್ನು ನನಸಾಗಿಸಲು ಹೋರಾಡಿದ ಬುಲ್‌ಫೈಟರ್‌ಗಳಾದ ಈವಾ ಫ್ಲೊರೆನ್ಸಿಯಾ ಹಾಗೂ ಮ್ಯಾರಿ ಪಾಜ್ ವೇಗಾ ಎಂಬ ಮಹಿಳೆಯರ ಕುರಿತಾದ ಈ ಸಿನಿಮಾವನ್ನು ಸೆಲೆಸ್ಟೆ ಕೊರಾಸ್ಕೊ ಹಾಗೂ ಜೆಮ್ಮಾ ಕ್ಯುಬೆರೊ ಎಂಬ ಮಹಿಳೆಯರೇ ರೂಪಿಸಿದ್ದಾರೆ.

ಪ್ರತಿಕ್ರಿಯಿಸಿ: feedback@sudha.co.in